ಯೋಜನೆ ಪ್ರತಿಭಾ ಕಾರಂಜಿ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಈ) ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲೂ ಸಹ ಆಂಗ್ಲ ಭಾಷೆಯನ್ನು 1ನೇ ತರಗತಿಯಿಂದ ಪರಿಣಾಮಕಾರಿಯಾಗಿ ಬೋಧಿಸಲು ಅವಕಾಶ ಮಾಡಿಕೊಡಲಾಗಿದೆ.

- ಆಂಗ್ಲ ಭಾಷಾ ಬೋಧಿಸುವ ಶಿಕ್ಷಕರಿಗೆ ಡಯಟ್ ಹಾಗೂ ಆರ್.ಐ.ಇ. ಮೂಲಕ ತರಬೇತಿ ನೀಡಲಾಗಿದೆ.
- ಪ್ರಾಥಮಿಕ ಶಾಲಾ ಹಂತದಲ್ಲಿ 1 ರಿಂದ 5ನೇ ತರಗತಿಗಳವರೆಗೆ ಆಂಗ್ಲ ಭಾಷೆಯನ್ನು ಒಂದು ಭಾಷೆಯಾಗಿ ಕಲಿಸುವುದು ಸರ್ಕಾರದ ನಿಲುವಾಗಿದೆ.

844 ಶ್ರೀ ಯು. ಟಿ. ಖಾದರ (ಮಂಗಳೂರು) : ಮಾನ್ಯ ವಯಸ್ಕರ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಯಸ್ಕರ ಶಿಕ್ಷಣಕ್ಕಾಗಿ ಈ ಸಾಲಿನ ಆಯವ್ಯಯದಲ್ಲಿ ಕಾಯ್ದಿರಿಸಿರುವ ಹಣ ಎಷ್ಟು?

ಆ) ಈ ಹಣದಲ್ಲಿ ಈಗಾಗಲೇ ಸರ್ಕಾರವು ಇಲಾಖೆಗೆ ಎಷ್ಟು ಹಣ ಬಿಡುಗಡೆ ಮಾಡಿದೆ, ಇಲಾಖೆಯು ಎಷ್ಟು ಹಣ ವ್ಯಯ ಮಾಡಿದೆ?

ಇ) ಇಲಾಖೆಯು ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ?

ಈ) ಈ ಕಾರ್ಯಕ್ರಮದ ಉಪಯೋಗ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಉ) ಇಲಾಖೆಯು ಯಾವ ಯಾವ ಸಂಸ್ಥೆಗಳ ಸಹಯೋಗ ದೊಂದಿಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಊ) ಈ ಸಂಸ್ಥೆಗಳಿಗೆ ಕಳಿದ 2 ವರ್ಷಗಳಿಂದ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ (ತಾಲ್ಲೂಕುವಾರು ಮಾಹಿತಿ ನೀಡುವುದು)

ಶ್ರೀ ಶಿವನಗೌಡ ನಾಯಕ್ (ವಯಸ್ಕರ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರು) :

ಅ) ವಯಸ್ಕರ ಶಿಕ್ಷಣಕ್ಕಾಗಿ ಈ ಸಾಲಿನ ಆಯವ್ಯಯದಲ್ಲಿ ಕಾಯ್ದಿರಿಸಿರುವ ಅನುದಾನದ ವಿವರ

ರಾಜ್ಯದ ವಲಯ		ಜಿಲ್ಲಾ ವಲಯ	(ಲಕ್ಷಗಳಲ್ಲಿ)
ಯೋಜನೆ	ಯೋಜನೇತರ	ಯೋಜನೆ	ಯೋಜನೇತರ
1200.00	290.61	397.23	212.03

ಆ)

(ಲಕ್ಷಗಳಲ್ಲಿ)

ರಾಜ್ಯ ವಲಯ					
ಯೋಜನೆ			ಯೋಜನೇತರ		
ವಾ.ನಿಗದಿ	ಬಿಡಗಡೆ	ಖರ್ಚು	ವಾ.ನಿಗದಿ	ಬಿಡುಗಡೆ	ಖರ್ಚು
1200.00	1200.00	832.70	290.61	290.61	188.17

ಜಿಲ್ಲಾ ವಲಯ					
ಯೋಜನೆ			ಯೋಜನೇತರ		
ವಾ.ನಿಗದಿ	ಬಿಡಗಡೆ	ಖರ್ಚು	ವಾ.ನಿಗದಿ	ಬಿಡುಗಡೆ	ಖರ್ಚು
397.23	239.47	89.34	212.03	154.25	129.10

ಇ) ಇಲಾಖೆಯು ಪ್ರಸಕ್ತ ಸಾಲಿನಲ್ಲಿ ಹಮ್ಮಿಕೊಂಡಿರುವ ಸಾಕ್ಷರತಾ ಕಾರ್ಯಕ್ರಮಗಳ ವಿವರ ಕೆಳಕಂಡಂತಿದೆ.

1) ವಿದ್ಯಾರ್ಥಿಗಳ ಮೂಲಕ ಸಾಕ್ಷರತೆ

2) ವಿಶೇಷ ಘಟಕ ಯೋಜನೆಯಡಿ ಶಿಬಿರ ಸಾಕ್ಷರತೆ

3) ಗಿರಿಜನ ಉಪಯೋಜನೆಯಡಿ ಶಿಬಿರ ಸಾಕ್ಷರತೆ

4) ಸಮುದಾಯ ಶಿಕ್ಷಣ ಮತ್ತು ವೃತ್ತಿ ಕೌಶಲ್ಯ ತರಬೇತಿ

5) ವಿಶೇಷ ಘಟಕ ಯೋಜನೆಯಡಿ ಪರಿಶಿಷ್ಟ ಜಾತಿ ನವಸಾಕ್ಷರರಿಗೆ ಜೀವನ ಕೌಶಲ್ಯಾಭವೃದ್ಧಿ ತರಬೇತಿ.

6) ಗಿರಿಜನ ಉಪಯೋಜನೆಯಡಿ ಪರಿಶಿಷ್ಟ ಪಂಗಡದ ನವಸಾಕ್ಷರರಿಗೆ ಕೌಶಲ್ಯಾಭಿವೃದ್ಧಿ ತರಬೇತಿ

7) ಬಾಕಿ ಉಳಿದ ಅನಕ್ಷರಸ್ಥರ ಸಾಕ್ಷರತಾ ಕಾರ್ಯಕ್ರಮ

8) ಮುಂದುವರಿಕೆ ಶಿಕ್ಷಣ ಕಾರ್ಯಕ್ರಮ

ಈ) ಈ ಕಾರ್ಯಕ್ರಮಗಳಲ್ಲಿ ಉಪಯೋಗ ಪಡೆದ ಫಲಾನುಭವಿಗಳ ಸಂಖ್ಯೆ 3370196 (ಜಿಲ್ಲಾವಾರು ಮಾಹಿತಿ ಲಗತ್ತಿಸಿದೆ).

ಅನುಬಂಧ 'ಅ'

ಉ) ಇಲಾಖೆಯು ವಿವಿಧ ಸಂಸ್ಥೆಗಳ ಸಹಯೋಗದೊಂದಿಗೆ ಸಾಕ್ಷರತಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವ ವಿವರಗಳ ಜಿಲ್ಲಾವಾರು ಪಟ್ಟಿಯನ್ನು ಲಗತ್ತಿಸಿದೆ. ಅನುಬಂಧ 'ಆ'

ಊ) ಕಳೆದ 2 ವರ್ಷಗಳಲ್ಲಿ ವಿವಿಧ ಕಾರ್ಯಕ್ರಮಗಳಿಗೆ ವಿವಿಧ ಸಂಸ್ಥೆಗಳಿಗೆ ತಾಲ್ಲೂಕುವಾರು ಬಿಡುಗಡೆ ಮಾಡಿರುವ ಅನುದಾನದ ವಿವರಗಳ ಪಟ್ಟಿಯನ್ನು ಲಗತ್ತಿಸಿದೆ. ಅನುಬಂಧ 'ಇ'

846 ಶ್ರೀ ಖಾದರ್ ಯು.ಟಿ. (ಮಂಗಳೂರು) : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುರಿ ಮತ್ತು ಕೋಳಿ ಸಾಕಾಣಿಕೆಗಾಗಿ ಬಿಡುಗಡೆ ಮಾಡಿರುವ ಅನುದಾನವೆಷ್ಟು? (ಫಲಾನುಭವಿಗಳ ಹೆಸರು ಮತ್ತು ವಿಳಾಸ ಒದಗಿಸುವುದು)

ಆ) ರಾಜ್ಯದಲ್ಲಿರುವ ಜಾನುವಾರುಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಇ) ಈ ಜಾನುವಾರುಗಳ ಅನುಪಾತಕ್ಕೆ ಅನುಗುಣವಾಗಿ ಚಿಕಿತ್ಸಾಲಯಗಳು ತೆರೆಯಲಾಗಿದೆಯೇ?

ಈ) ಈ ಚಿಕಿತ್ಸಾಲಯಗಳಲ್ಲಿ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ, ಈ ಹುದ್ದೆಗಳನ್ನು ಎಂದು ಭರ್ತಿ ಮಾಡಲಾಗುವುದು.